ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?•

1. ಬೆಂಗಳೂರು ನಗರದ ಬನಶಂಕರಿ ದೇವಸ್ಥಾನದ ಆಸ್ತಿಯನ್ನು ಖಾಸಗಿಯವರಿಗೆ ಕಡಿಮೆ ದರದಲ್ಲಿ ಲೀಸ್ ನೀಡಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

2. ದೇವಸ್ಥಾನಕ್ಕೆ ಸೇರಿದ ಹಣ ಒಡವೆ ವಸ್ತುಗಳನ್ನು ದುರುಪಯೋಗ ಮಾಡಿಕೊಂಡಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

3. ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಬಾಬುರಾವ್ ಚಿಂಚಸನೂರು (ಮುಜರಾಯಿ ಸಚಿವರು):

1. ಶ್ರೀ ಬನಶಂಕರಿ ದೇವಾಲಯಕ್ಕೆ ಸೇರಿದ ಸ. ನಂ.60/2 ರಲ್ಲಿನ ಜಮೀನಿನಲ್ಲಿ 200 X 200 ವಿಸ್ತೀರ್ಣದ ಜಾಗವನ್ನು ನಿಡುಮಾಮಿಡಿ ಮಠದವರಿಗೆ ಸರ್ಕಾರವು ಆದೇಶ ಸಂಖ್ಯೆ: ಕಂಇ 33 ಮುಆಬಿ 98 ದಿನಾಂಕ: 18/05/99ರಲ್ಲಿ ಗುತ್ತಿಗೆಗೆ ನೀಡಿದ್ದು ಪುನಃ ಸರ್ಕಾರದ ಆದೇಶ ಸಂಖ್ಯೆ: ಕಂಇ 246 ಮುಆಬಿ 99 ದಿನಾಂಕ: 03/10/2000ರಲ್ಲಿ ಅದನ್ನು ತಡೆಹಿಡಿಯಲಾಗಿದೆ.

2. ದೇವಾಲಯಕ್ಕೆ ಸೇರಿದ ಹಣ ಒಡವೆ ದುರುಪಯೋಗವಾಗಿರುವುದಿಲ್ಲ.

3. ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಕುಡಿಯುವ ನೀರಿನ ಕಾಮಗಾರಿಗಳ ಟೆಂಡರನ್ನು 5 ಲಕ್ಷ ರೂ.ಗಳಿಗೆ ಏರಿಸುವ ಪ್ರಸ್ತಾವನೆ.

3021(3712)

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ(ಕುಂದಾಪುರ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕುಡಿಯುವ ನೀರಿನ ಯೋಜನೆಗಳ ಕಾಮಗಾರಿಯನ್ನು ರೂಪಾಯಿ 2.00 ಲಕ್ಷಕ್ಕೆ ಮತ್ತು ಇತರೆ ಕಾಮಗಾರಿಗಳಿಗೆ ರೂಪಾಯಿ 1.00 ಲಕ್ಷಕ್ಕೆ ಟೆಂಡರ್ ಕೂಡುವ ಪದ್ಧತಿ ಜಾರಿಗೆ ತಂದು ಪಾರದರ್ಶಕತೆ ಕಾಮಗಾರಿಗಳಿಗೆ ಅವಕಾಶ ಕಲ್ಪಿಸಲಾಗಿದ್ದು, ಸದರಿ ಮೊತ್ತವನ್ನು 5.00 ಲಕ್ಷಕ್ಕೆ ಏರಿಸುವ ಪ್ರಸ್ತಾವನೆ ಸರ್ಕಾರಕ್ಕಿದೆಯೇ?

ಆ) ಹೌದಾದಲ್ಲಿ ಟೆಂಡರ್ ಮೊತ್ತವನ್ನು ಏರಿಸುವುದರಿಂದ ತುಂಡು ಕಾಮಗಾರಿಗೆ ಗುತ್ತಿಗೆ ನೀಡುವುದರಿಂದ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿ ಹಣ ದುರುಪಯೋಗವಾಗುವುದಿಲ್ಲವೇ?

ಇ) ಎಷ್ಟೇ ಮೊತ್ತದ ಕೆಲಸವಾದರೂ ಸ್ಪರ್ಧಾತ್ಮಕ ಟೆಂಡರ್ ಕರೆದು ಕಾಮಗಾರಿ ಮಾಡಿರುವುದು ಒಳ್ಳೆಯ ಪದ್ಧತಿಯಾಗಿದ್ದು, ಪ್ರಕೃತಿ ವಿಕೋಪದ ಸಂದರ್ಭ ಹೊರತುಪಡಿಸಿ ಹಿಂದಿನ ರಾಜರ ಕಾಲದಂತೆ ಗುತ್ತಿಗೆ ಕೊಡುವ ಪದ್ಧತಿ ಸ್ವಜನ ಪಕ್ಷಪಾತಕ್ಕೆ ಕಾರಣವಾಗುವುದಿಲ್ಲವೇ?

ಈ) ಇದರಿಂದ ಸರ್ಕಾರದ ವರ್ಚಸ್ಸಿಗೆ ಧಕ್ಕೆಯುಂಟಾಗುವುದಿಲ್ಲವೇ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶಾಸಕರ ಪ್ರದೇಶಾಭಿವೃದ್ಧಿ ನಿಧಿ ರಚನೆ.

3023(3714)

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ(ಕುಂದಾಪುರ): ಮಾನ್ಯ ಯೋಜನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2001-2002ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಿದ ''ಶಾಸಕರ ಪ್ರದೇಶಾಭಿವೃದ್ಧಿ ನಿಧಿ'' ರಚನೆಗೆ ಸಂಬಂಧಪಟ್ಟಂತೆ ಸರ್ಕಾರಿ ಆದೇಶ ಆಗಿದೆಯೇ?

ಆ) ಸದರಿ ಯೋಜನೆಯನ್ನು ಯಾವಾಗ ಅನುಷ್ಠಾನಕ್ಕೆ ತರಲಾಗುವುದು?

ಶ್ರೀಮತಿ ಸುಮಾ ವಸಂತ್ (ಯೋಜನಾ ರಾಜ್ಯ ಸಚಿವರು):

ಅ) ಈ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಮಾರ್ಗಸೂಚಿಯನ್ನು